Doc-24
T-P.2

R No KKNN 12

23-2-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

First Golden Jubilee Celebrated Paper in The State

★★ Now in 57 th Year ★★

'Satyavadi daily, Mysore 4

ಪ್ರಕಾಶಕರು ಆರ್ಯಮನೆ ಲಕ್ಷ್ಮಣರಾವ್ ಎಂ ವಿ ಸುಬ್ಬರಾವ್ ಸಂಪಾದಕರು: ಧರ್ಮಕರ್ತ ಚಾರುವಿರಮ ಎಂ. ಎಸ್. ಕೃಷ್ಣರಾವ್ [3 ನಯಾ

ಮಿತವ್ಯಯದಿಂದ ಕೇಂದ್ರಕ್ಕೆ ಉಳಿತಾಯ

400 M. Tons of Cowdung burnt as Fuel in India

About 400 million tonnes of cowdung is burnt as domestic fuel every year in Indian villages

In terms of fertilisers, this is equivalent of eight times the present output of Sindri Fertiliser plant

The Commision feels that in the context of the present fertiliser scarcity and tight agricultural production, use of cowdung as domestic fuel is a crime

— A B atrika

★

ಎಂ ಎಲ್ ಎ ಗಳಿಗೆ ಬೆದರಿಕೆ

ಬರೋಡಾ— ಇಲ್ಲಿಯ ಶಾಸಕರಿಗೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ನರೇಂದ್ರ ತಿವಾರಿಯವರು 72 ಗಂಟೆಗಳೊಳಗೆ ರಾಜೀನಾಮೆ ಕೊಡಬೇಕೆಂದೂ ತಪ್ಪಿದರೆ ಪಿಕೆಟ್ ಮಾಡಲಾಗುವುದೆಂದೂ ಕಟ್ಟಕಡೆ ತಿಳುವಳಿಕೆ ಕೊಟ್ಟಿರುವರು.

★

ಮಂಗಳೂರು–ಹಾಸನ ರೈಲು

ನವದೆಹಲಿ— 1964 ರಲ್ಲಿ ಪ್ರಾರಂಭವಾದ ಮಂಗಳೂರು–ಹಾಸನ ರೈಲ್ವೇ ಲೈನು ನಿರ್ಮಾಣ ಕಾರ್ಯವು 1976 ಡಿಸೆಂಬರಿನಲ್ಲಿ ಮುಗಿಯುವುದು ; ಖರ್ಚು ರೂ. 3587 ಲಕ್ಷ

★

ಕ್ಷೀರ ಸ್ಕೀಂ

ಹಾಸನ— ಈ ಜಿಲ್ಲೆಯಲ್ಲಿ (ಡೈರಿ) ಸ್ಕೀಂ ಮತ್ತು ಪಶುಸಂಪತ್ತು ಅಭಿವೃದ್ಧಿಗಾಗಿ 5 ನೇ ಯೋಜನೆಯಲ್ಲಿ ರೂ. 10 ಕೋಟಿ ಖರ್ಚು ಮಾಡಲಾಗುವುದೆಂದು ಪಶುಸಂಗೋಪನಾ ಮಂತ್ರಿ ಶ್ರೀ ಜಿ ಕೆ ಗೌಡರು ಹೇಳಿದರು.

ಪಕ್ಷಗಳ ನ್ಯಾಯಕರು

ಪಾಂಡಿಚೆರಿ— ಚುನಾವಣೆಯಲ್ಲಿ ಹೋರಾಡುತ್ತಿರುವ ಕಾಂಗ್ರೆಸ್, ಹಳೇ ಕಾಂಗ್ರೆಸ್, ಡಿ ಎಂ ಕೆ, ಮತ್ತು ಕವಮ್ಮನಿಷ್ಟ ನಾಯಕರುಗಳು ಇಲ್ಲಿಯ ಸರಕಾರಿ ಅತಿಥಿಗೃಹದ 34 ಕೊಠಡಿಗಳಲ್ಲಿ ತಂಗಿದ್ದಾರೆ

★

ಭೂ ಸುಧಾರಣೆ

ನವದೆಹಲಿ– ಕರ್ನಾಟಕದ ಪಂಚಾಯತ್ ಮಂತ್ರಿ ಶ್ರೀ ಹುಚ್ಚವ್ವನಾಸ್ತಿಗೌಡರು ಕೇಂದ್ರ ಗೃಹ ಸ್ಟೇಟ್ ಮಂತ್ರಿ ಶ್ರೀ ರಾಮ ನಿವಾಸ್ ಮಿರ್ಧಾರವರೊಡನೆ ರಾಜ್ಯದ ಭೂಸುಧಾರಣಾ ಮಸೂದೆ ಬಗ್ಗೆ ಮಾತ್ಕತೆ ನಡೆಸಿದರು – ಅದರ ಜಾರಿಗೆ ಅಧ್ಯಕ್ಷರ ಅನುಮತಿ ಕೂಡಲೇ ದೊರೆಯುವಂತೆ ಕೇಳಿದರು ; ಈ ಬಗ್ಗೆ ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳು ಇದನ್ನು ತೀವ್ರವಾಗಿ ವಿರೋಧಿಸಿವೆ.

●

ಭಾಷಾವಾರು ಗಲಭೆಯಿಂದಾದದ್ದು

ಬೊಂಬಾಯಿ— ಡಿಸೆಂಬರು 9 ರಲ್ಲಿ ಕೊಲ್ಲಾಪುರದಲ್ಲಾದ ಗಲಭೆ ಲೂಟಿ ಅಗ್ನಿ ಸ್ಪರ್ಶಗಳಿಂದ ರೂ. 59.21 ಲಕ್ಷ ಆಸ್ತಿ ನಷ್ಟವಾಗಿದೆ ಯೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು – ಗಲಭೆಯಲ್ಲಿ 148 ಕನ್ನಡಿಗರೂ 90 ಮಂದಿ ಇತರ ಭಾಷೆಯವರೂ ಸಂಕಟಕ್ಕೀಡಾದರೆಂದೂ ತಿಳಿಸಲಾಯಿತು

○

ದಿವ್ಯವಾಣಿ

ನನ್ನ ಜೊತೆಗಾರ ಅಪನಂಬಿಕಸ್ಥನಾಗಿದ್ದರೆ, ನಾವು ಅವನಲ್ಲಿ ವಿಶ್ವಾಸವುಳ್ಳವನಾಗಿರೋಣ, ಶತ್ರುವು ಕೆಡಕುಮಾಡಿದರೆ ಅವನನ್ನು ಕ್ಷಮಿಸೋಣ, ಸ್ನೇಹಿತನು ದ್ರೋಹ ಮಾಡಿದರೆ ಅವನ ಪರ ನಿಲ್ಲೋಣ, ಆಗ ನಮ್ಮಲ್ಲಿ ಔತುಕೊಂಡಿರುವ ದೇವರು ಪ್ರಕಾಶಿಸುವನು. – ಆನಿ ಬೆಸೆಂಟ್

ಬಾಂಗ್ಲಾದೇಶ

ನವದೆಹಲಿ— ಶಿಕಿಷ್ತಾನ ನುತ್ತ ಬಂಗ್ಲಾದೇಶಗಳ ಸಮಯುಕ್ತ ಮಾನ್ಯತೆ ನೀಡಿದವು; ಪ್ರಧಾನಿ ಮುಜೀಬರು ಇಸ್ಲಾಂ ಉನ್ನತಮಟ್ಟದ ಸಮ್ಮೇಳನಕ್ಕೆ ಹೋಗುವರು

★

ಯುವಕ ಲಾಯರುಗಳ ಸಮ್ಮೇಳನ

ನವದೆಹಲಿ— ಯುವಕ ಲಾಯರುಗಳ ಸಮ್ಮೇಳನದಲ್ಲಿ— ನ್ಯಾಯಾಂಗ ಸ್ವತಂತ್ರ್ಯ ಕಾಪಾಡಲು ಅಟರ್ನಿ ಜನರಲ್, ಸಲಿಸಿಟರ್ ಜನರಲ್, ಅಡ್ವೊಕೇಟ್ ಜನರಲ್‌ರನ್ನು ಸುಪ್ರೀಂ ಕೋರ್ಟು ನ್ಯಾಯಾಧೀಶರನ್ನಾಗಿ ಮಾಡಬಾರದೆಂದೂ, ಉನ್ನತ ನ್ಯಾಯಸ್ಥಾನದ ಜಡ್ಜರು ನಿವೃತ್ತರಾದ ಮೇಲೆ ಕೇಂದ್ರ ಯಾವ ನೇಮಕವನ್ನೂ ಸ್ವೀಕರಿಸಬಾರದೆಂದೂ, ನಿವೃತ್ತ ನ್ಯಾಯಾಂಗಾಧಿಕಾರಿಗಳು ತಮ್ಮ ಪೆನ್ಷನ್, ಪ್ರಾವಿಡೆಂಟ್ ಫಂಡ್ ತ್ಯಜಿಸಬಲ್ಲವೆ ನಿರ್ಣಯಿಸಲು ಸಮಿತಿಯೊಂದನ್ನು ನೇಮಿಸುವುದನ್ನು ಪ್ರತಿಬಂಧಿಸಬೇಕೆಂದೂ ತೀರಾವುಗಳು ಮಂಡಿಸಿದವು

★

ಮೈಸೂರು— ಕೃಷ್ಣರಾಜ ಕ್ಷೇತ್ರದ ಶಾಸನಸಭಾ ಉಪಚುನಾವಣೆಗೆ 18 ಮಂದಿ ನಾಮಪತ್ರ ಸಲ್ಲಿಸಿರುವರು.

ಚಿನ್ನದ ಬೆಲೆ

ವಾಷಿಂಗ್ಟನ್– ಒಂದು ಔನ್ಸು ಚಿನ್ನಕ್ಕೆ 2000 ಡಾಲರು (ರೂ. 1500) ಆದರೂ ಆಗಬಹುದೆಂದು ನಿಪುಣರ ಅಭಿಪ್ರಾಯ !

ಮಿತವ್ಯಯದ ಫಲಿತಾಂಶ

ನವದೆಹಲಿ— ಈ ಆರ್ಥಿಕ ವರ್ಷದಲ್ಲಿ ಹಲವು ಸಚಿವಾಲಯಗಳೂ ಇಲಾಖೆಗಳೂ ಮಿತವ್ಯಯ ಅನುಸರಿಸಿದ್ದರಿಂದ ರೂ. 371.51 ಕೋಟಿ ಉಳಿತಾಯವಾಗಿದೆ.

★

ಬ್ಯಾಂಕುಗಳ ಬಂದ್

ಅಹಮದಾಬಾದು– 4 ದಿನಗಳಿಂದ ಪ್ರತಿಭಟನೆಯುತ್ತಿರುವ ಹಿಂಪಾಕೃತ್ಯ ಗಲಭೆಗಳಿಗಾಗಿ ಎಲ್ಲಾ ಮಾರುಕಟ್ಟೆಗಳೂ ಬ್ಯಾಂಕುಗಳೂ ಅನಿರ್ದಿಷ್ಟ ಕಾಲ ಮುಚ್ಚಿರಲು ನಿರ್ಧರಿಸಿವೆ

★

ನೋಟುಗಳ ಹೆಚ್ಚಳ

ನವದೆಹಲಿ— ಈ ಫೆಬ್ರವರಿ 1 ರಂದು ರೂ. 6010 ಕೋಟಿ ನೋಟುಗಳು ಚಲಾವಣೆಯಲ್ಲಿದ್ದವು ; ಇದು 1973 ಜನವರಿಯಲ್ಲಿದ್ದುದಕ್ಕಿಂತ ಶೇಕಡ 18 2 ಕಚ್ಚು !

★

ಬೆಳ್ಳಿ ಬೆಲೆ ಏರಿಕೆ

ಬೆಳ್ಳಿ ಗಟ್ಟಿಗಳ ರಫ್ತಿಗೆ ಕೇಂದ್ರ ಸರಕಾರ ಅನುಮತಿಸಿರುವುದರಿಂದ ಅದರ ಬೆಲೆ ಹೆಚ್ಚುವಂತಾಗಿದೆ – ಫೆಬ್ರವರಿ 12 ರಂದು ಕೆಜಿಗೆ ರೂ 1300 ಆಗಿದ್ದುದನ್ನು ಸ್ಮರಿಸಿಕೊಳ್ಳಬಹುದು.

★

ಭಾರತಕ್ಕೆ ಇಂಕ್ ದೇವು

ನವದೆಹಲಿ— ಭಾರತಕ್ಕೆ 5 ವರ್ಷ ಕಾಲದಲ್ಲಿ ಹೆಚ್ಚು ಕಚ್ಚಾ ಎಣ್ಣೆ ಸರಬರಾಜು ಮಾಡಲು ಒಪ್ಪಿದೆ ; ಜೊತೆಗೆ ಕರ್ನಾಟಕದ ಕುದುರೆಮುಖ ಸ್ಕಾಜೆಕ್ಟಿಗೆ ಮತ್ತು ಅಲ್ಯೂಮಿನಿಯಂ ಸೌಕರ್ಯ ವಿಸ್ತರಿಸಲು ಒಟ್ಟು ರೂ. 287 ಕೋಟಿಯ ಎರಡು ಸಾಲಗಳನ್ನು ಕೊಡಲೂ ಒಪ್ಪಿದೆ.

○ ಭಾರತವು ಸೋವಿಯೆನಿಂದ ಕೆಲವು ಹೆಚ್ಚು ಹಡಗುಗಳನ್ನು ಕೊಳ್ಳುವ ಸಂಭವನೀಯ ಎಂದು ಪ್ರಕಟವಾಗಿದೆ.

ಲಕ್ಷ ಜನರ ಸೇರುವಿಕೆಗೆ

ಬೊಂಬಾಯಿ— ರಿಬ್ಬನ್ ಪಾರ್ಟಿಯ 1 ಲಕ್ಷ ಅನುಯಾಯಿಗಳು ಮೊನ್ನೆ ಐತಿಹಾಸಿಕ ಆಜಾದ್ ಮೈದಾನದಿಂದ ಪಚಿವಾಲಯದ ಹತ್ತಿರ ಇರುವ ಓವಲ್ ಸೈದಾನಕ್ಕೆ ಸೆರವಣಿಗೆಯಲ್ಲಿ ಹೋಗಿ ಅಲ್ಲಿ ಬಹಿರಂಗ ಸಭೆ ನಡೆಸಿದರು ಅವರ ಕಳಿಕೆಗಳ ಮನವಿಪತ್ರವು ಮುಖ್ಯಮಂತ್ರಿ ಶ್ರೀ ನಾಯಿಕ್‌ರವರಿಗೆ ಕೊಡಲಾಯಿತು.

★

ನೈಜಾಮರ ಅರಮನೆಗಳ ಜಪ್ತಿ

ಹೈದರಾಬಾದು— ಮಾಜಿ ನೈಜಾಮ್ ಮಿರ್ ಉಸ್ಮಾನ್ ಅಲ್ಲೀಖಾರವರ ಸಾವಿನ ತೆರಿಗೆ ರೂ 1 60 ಕೋಟಿ ಮತ್ತು ಆದಾಯ ತೆರಿಗೆ ಬಾಕಿ ರೂ. 80 ಲಕ್ಷ ಕ್ಕಾಗಿ, ಅವರ ಕಿಂಗ್ ಕೋಠಿ, ಫಾಲುಕ್‌ನುಮಾ ಅರಮನೆ, ಕೋಠಿ ಅಸಫಿಯಾ, ಚಿರ್ಮಾ ಅರಮನೆ, ಜೇಬಾಬಾಗ್, ಮತ್ತು ರೂ. 12 ಲಕ್ಷ ಕಂಪೆನಿ ಷೇರುಗಳು ಜಪ್ತಿ ಮಾಡಲ್ಪಟ್ಟವು – ಕಿಂಗ್ ಕೋಠಿ ಸರಂಜಗೆ ಕೇಂದ್ರ ಅನುಮತಿ ನೀಡಿದೆ – ಮಿಕ್ಕವುಗಳು ಮುಂದಿನ ತಿಂಗಳು ಹರಾಜು ಮಾಡಲ್ಪಡುವವು

★

ಹಾರಾಡುವ ಪದಾರ್ಥ

ಹತ್ತೀಸಬರ್ಗ್ (ಮಿಸಿಸಿಪಿ)— ಈ ಅರಣ್ಯ ಪೇಶದಲ್ಲಿ ಮೊನ್ನೆ ಒಂದು ಚಿಕ್ಕ ಮನೆಯಷ್ಟು ಪ್ರಮಾಣದ ಗುರ್ತಿಸಲ್ಪಡದ ಹಾರುವ ವಸ್ತುಗಳನ್ನು 10–12 ಜನ ಕಂಡುದಾಗಿ ವರದಿಯಾಗಿದೆ – ಅವು ಭೂಮಿ ಕಡೆಗೆ ಬರುತ್ತಿದ್ದು, ನಂತರ ಅಕಾಶಕ್ಕೆ ಮಾಯವಾದವೆನ್ನಲಾಗಿದೆ.

ವುಡ್‌ಲಾಂಡ್ಸ್ 22 2 74 ರಿಂದ

ಅವೋಘ 7 ನೇ ವಾರ

ಅಮಿಯಾಸ್‌ರವರ ಹಿಂದಿ ಕಲರ್ ಮಹೋನ್ನತ ಚಿತ್ರ

ಅ ಭಿ ಮಾ ನ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಅಮಿತಾಬ್‌ಚರ್ಚ ಜಯಬಾದುರಿ ಡೇವಿಡ್ ಇಂದು

ಬೆಳಗಿನ ಪ್ರದರ್ಶನ 10 30 ನವರಾತ್ರಿ

ಅಪೇರಾ 20 2 74 ರಿಂದ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ.

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ಸತ್ಯ

ಚಿತ್ರಕಥೆ. ಸಾಹಿತ್ಯ. ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು

For Large Range of Daily Wear

Nylex, Cotton, Voile, etc. Sarees
in up-to-date Designs

Please Visit :

Bank Road Bahusar

S H A K T I

S U D H A

A Superb Tonic

Help The Gorakshana

— HumanitarianPropoganda Monthly —

Protect the Cow

All India Blind Welfare Week

21 st February to 27 February 1974

Flag Day on 26 th February 1974

Donate generouly for the cause of the the Blind

Sponsored by :

sri sri Bijoy Krishna Ashram Relief Society [Regd]
Netaji Eye & General Hospital
P O. Ramachandrapur Ashram, Dist. Purulia (W. Bengal)

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited-Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore